# ನದಿ ದಾಟಿಸುವ ತೆಪ್ಪ

ಮಳೆಗಾಲದಲ್ಲಿ ನದಿ ಉಕ್ಕಿ ಹರಿದಾಗ ನದಿಯ ಇಕ್ಕೆಲಗಳ ಹಳ್ಳಿಗಳ ಸಂಪರ್ಕ ತಪ್ಪಿ ಹೋಗುವುದು ಸ್ವಾಭಾವಿಕ. ಅದನ್ನು ತಪ್ಪಿಸಲು ಜನರ ಸರಾಗ ಸಂಚಾರಕ್ಕೆ ದಕ್ಷಿಣ ಕನ್ನಡದ ಬೆಳ್ತಂಗಡಿಯಲ್ಲಿ ಇರುವ ಕಾಜೂರು ಬಳಿ ಈ ಹಿಂದೆ ಅಳವಡಿಸಲಾಗಿದ್ದ ವ್ಯವಸ್ಥೆಯೇ ಈ ತೆಪ್ಪ!

ಪ್ರತೀ ವರ್ಷ ನದಿಯ ಎರಡೂ ದಡಗಳಲ್ಲಿ ದೊಡ್ಡ ಮರಗಳಿಗೆ ಅಥವಾ ಗಟ್ಟಿಯಾದ ಕಂಬಗಳಿಗೆ ಬೆತ್ತವನ್ನು ಬಿಗಿಯಾಗಿ ಕಟ್ಟಲಾಗುತ್ತದೆ. ಬಳಿಕ 10–12 ಬಿದಿರನ್ನು ಒಟ್ಟಾಗಿ ಜೋಡಿಸಿ ಅದಕ್ಕೆ ರಾಟೆಯನ್ನು ಕಟ್ಟಲಾಗುತ್ತದೆ. ಬಿದಿರು ನೀರಿನಲ್ಲಿ ತೇಲುವ ಕಾರಣ ಈ ತೆಪ್ಪದ ಮೇಲೆ 5–6 ಜನ ಏಕ ಕಾಲದಲ್ಲಿ ಪ್ರಯಾಣಿಸಲು ಸಾಧ್ಯವಾಗುತ್ತದೆ. ಒಬ್ಬ ವ್ಯಕ್ತಿ ನಿಧಾನವಾಗಿ ರಾಟೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಎಳೆದಾಗ ತೆಪ್ಪ ನಿಧಾನವಾಗಿ ನದಿಯಲ್ಲಿ ಸಾಗುತ್ತದೆ. ಈ ರೀತಿ ತೆಪ್ಪ ಅಳವಡಿಕೆ ಮಾಡಿದ ವ್ಯಕ್ತಿ ನದಿಯಲ್ಲಿ ಸಂಚರಿಸುವವರಿಂದ 5 ರೂಪಾಯಿ ಸುಂಕ ಪಡೆಯುತ್ತಾರೆ. ಈಗ ಇಲ್ಲಿ ಸೇತುವೆ ನಿರ್ಮಾಣ ಆಗಿರುವ ಕಾರಣ ತೆಪ್ಪ ಮರೆಯಾಗಿದೆ. ಆದರೆ ಹಳೆಯ ನೆನಪು, ತೆಪ್ಪದ ಸರಳ ತಂತ್ರಜ್ಞಾನ ಜನಮಾನಸದಲ್ಲಿ ಇನ್ನೂ ಮರೆಯಾಗದೆ ಉಳಿದಿದೆ.

ಅರುಣ್ ಕಿಲ್ಲೂರು





# ಸ್ವಾತಂತ್ರ್ಯ ಯೋಧನ ಹುಟ್ಟು ಹಬ್ಬ

ಸ್ವಾತಂತ್ರ್ಯ ಹೋರಾಟಗಾರ ಹುಲಿಕಲ್ ನಾಗಭೂಷಣರಾಯರು ತಮ್ಮ ನೂರನೇ ಜನ್ಮದಿನವನ್ನು ಮನೆಯಲ್ಲೇ ಆಚರಿಸಿಕೊಂಡರು. 1921ರ ಜೂನ್ 21ಕ್ಕೆ ನೂರು ವಸಂತ ಕಂಡರು. ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿದ್ದ ಅವರು, 'ಕಾನೂನು ಭಂಗ ಚಳುವಳಿ'ಯ ಕಿಚ್ಚನ್ನು ಮಲೆನಾಡಿನಲ್ಲಿ ಹಬ್ಬಿಸಿದ್ದರು.

ಇದಕ್ಕಾಗಿ ಸೆರೆವಾಸ ಕಂಡಿದ್ದರು. ಕೊರೊನಾ ಕಾರಣಕ್ಕೆ ಕುಟುಂಬಸ್ಥರ ಸಹಕಾರದಿಂದ ಆನ್ ಲೈನ್ ಕಾರ್ಯಕ್ರಮದ ಮೂಲಕ ರಾಯರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ತಮ್ಮ ದೀರ್ಘಾಯಸ್ಸಿನ ಗುಟ್ಟು ಬಿಚ್ಚಿಟ್ಟ ಅವರು ಯೋಗಾಭ್ಯಾಸ ಮತ್ತು ನಿಷ್ಕಲ್ಮಶ ಮನಸ್ಸು ಮತ್ತು ಶಿಸ್ತುಬದ್ಧ ಜೀವನ ಕ್ರಮದಿಂದ ಈ ಪೂರ್ಣ ಬಾಳು ಸಾಧ್ಯವಾಯಿತು ಎಂದರು. ನೂರರ ಇಳಿ ವಯಸ್ಸಿನಲ್ಲೂ ಯೋಗವನ್ನು ಅಭ್ಯಾಸ ಮಾಡುತ್ತಾರೆ.

—ವಾ. ಮುರಳೀಧರ ತೀರ್ಥಹಳ್ಳಿ

# ಲಿಂಗ ರೂಪಿ ಸುವರ್ಣ ಹೂ

ಮುಂಗಾರಿನ ಎರೆಡು ಮೂರು ಹದ ಮಳೆಯಾಗಿ ಭೂಮಿ ತೋಯ್ದು ಮೆತ್ತಗಾದ ಕೂಡಲೆ, ಅಂದರೆ ಮಳೆಗಾಲದ ಆರಂಭದಲ್ಲಿ, ಮಲೆನಾಡಿನ ಬಹುತೇಕ ಕಡೆ ಅನೇಕ ಬಗೆಯ ಸಸ್ಯಗಳು ಜನ್ಮ ತಾಳುವಂತೆ, ಸುವರ್ಣ ಗಡ್ಡೆಯ ಸಸ್ಯಗಳೂ ಸಹ ಹುಟ್ಟಿ ಬೆಳೆಯುತ್ತವೆ. ಅದರಲ್ಲಿ ಕೆಲವೊಂದು ಹೂ ಬಿಡುತವೆ.

ಈ ಹೂವುಗಳು ನೋಡಲು ಆಕರ್ಷಣೀಯವಾಗಿರುತ್ತವೆ. 'ಎಲೆಫಂಟ್ ಫೂಟ್ ಯಾಮ್' ಎಂಬುದು ಇದರ ವೈಜ್ಞಾನಿಕ ಹೆಸರು. ಇದನ್ನು ಸುವರ್ಣ ಗಡ್ಡೆ, ಕಂದ ಗಡ್ಡೆ, ಸೂರಣ ಗಡ್ಡೆ ಎಂದು ಕರೆಯುತ್ತಾರೆ. ಮತ್ತೆ ಕೆಲವು ಕಡೆ 'ಗಂಡೀರ' ಎಂದೂ ಕರೆಯುತ್ತಾರೆ.

ಇದರಲ್ಲಿ ಹಲವು ವಿಧಗಳಿದ್ದು, ಹೂವು, ಬಣ್ಣ, ಗಾತ್ರ ವಿನ್ಯಾಸದಲ್ಲೂ ಸಹ ಬೇರೆ ಬೇರೆ ಆಗಿರುತ್ತವೆ. ಇದರಲ್ಲಿ ಕೆಲ ವಿಧದ ಗಡ್ಡೆಯನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಈ ಹೂವುಗಳು ಸಾಮಾನ್ಯವಾಗಿ ಮೂರರಿಂದ ನಾಲ್ಕೈದು ದಿನದವರೆಗೆ ಇರುತ್ತವೆ. ನೋಡಲು ಚಂದ ಇದ್ದರೂ ಪರಿಮಳ ಅಥವಾ ವಾಸನೆ ಅಷ್ಟೇ ಕೆಟ್ಟದಾಗಿರುತ್ತದೆ. ಸಾಮಾನ್ಯವಾಗಿ ಗಾತ್ರದಲ್ಲಿ ದೊಡ್ಡದಾಗಿರುವುದಿಲ್ಲ. ಆದರೆ ಇದು ದೊಡ್ಡದಾಗಿದೆ. ಈಶ್ವರ ಲಿಂಗುವನ್ನು ಹೋಲುವಂತೆ ಕಾಣುತ್ತದೆ.

—ಹೆಚ್.ಜಿ. ಅರುಣ್ ಕುಮಾರ್ ಹುರುಳಿ

